ಕಾಡಾನೆಗಳ ಹಾವಳಿಗೆ ತುತ್ತಾದವರಿಗೆ ಪರಿಹಾರ

7( 349)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ): ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಯ ಹಾವಳಿಯನ್ನು ತಪ್ಪಿಸಲು ಏನು ಕ್ರಮ ಕೈಗೊಳ್ಳಲಾಗಿದೆ ?

ಆ) ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಎಷ್ಟು ಹಣ ಬಾಕಿ ಇದೆ?

ಈ) ಉಳಿಕೆ ಹಣದಲ್ಲಿ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) 1) ಆಯಕಟ್ಟಿನ ಅರಣ್ಯ ಪ್ರದೇಶಗಳಲ್ಲಿ ಆನೆತಡೆ ಕಂದಕ ನಿರ್ಮಿಸಲಾಗಿದೆ.

2) ಆನೆಕಂದಕ ನಿರ್ಮಿಸಲಾಗದ ಪ್ರದೇಶಗಳಲ್ಲಿ ಸೌರಶಕ್ತಿ ತಂತಿ ಬೇಲಿ ನಿರ್ಮಿಸಿ ಆನೆ ಬಾರದಂತೆ ಮಾಡಿದೆ.

3) ಕಾಡಾನೆಗಳನ್ನು ಹಿಡುವಳಿ ಜಮೀನಿನಿಂದ ಕಾಡಿಗೆ ಓಡಿಸಲು ಕೂಲಿಯಾಳುಗಳ ತಂಡಗಳನ್ನು ನೇಮಿಸಿಕೊಳ್ಳಲಾಗಿದೆ. ಅವರು ಹಗಲೂ ರಾತ್ರಿ ಗಸ್ತು ತಿರುಗಿ ಆನೆಗಳನ್ನು ಕಾಡಿಗೆ ಓಡಿಸಲು ಕ್ರಮ ಕೈಗೊಳ್ಳುವರು. ಈ ತಂಡಗಳಿಗೆ ವಾಹನ ಮತ್ತು ಪಟಾಕಿ ಪೂರೈಸಲಾಗಿದೆ.

ಆ) ರೂ. 8, 15, 144.00

ಇ) ಪೂರ್ಣ ಹಣ ಖರ್ಚಾಗಿದೆ.

ಈ) ಉದ್ಭವಿಸುವುದಿಲ್ಲ.

ರೈತರು ಸ್ವಂತ ಉಪಯೋಗಕ್ಕಾಗಿ ಒದಗಿಸುವ ಮರದ ಪ್ರಮಾಣ.

8( 352)